ಪತ್ರಿಕಾ ಪ್ರಕಟಣೆ
ಆಗಸ್ಟ್ ೩೧, ೨೦೦೬

**ನಕ್ಷತ್ರ ಮಾಲಿಕೆ ನೋಟುಗಳ ಬಿಡುಗಡೆ**

ನಕ್ಷತ್ರ ಮಾಲಿಕೆ ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಶೀಘ್ರದಲ್ಲಿಯೇ ಬಿಡುಗಡೆ ಮಾಡಲಿದೆ. ಆರಂಭದಲ್ಲಿ ಈ ನೋಟುಗಳನ್ನು ಮಹಾತ್ಮ ಗಾಂಧಿ ಶ್ರೇಣಿ-೨೦೦೫ರಲ್ಲಿ ರೂ.೧೦, ರೂ.೨೦ ಮತ್ತು ರೂ.೫೦ರ ಮೌಲ್ಯವರ್ಗದಲ್ಲಿ ಬಿಡುಗಡೆ ಮಾಡಲಾಗುವುದು. ನಕ್ಷತ್ರ ಮಾಲಿಕೆ ನೋಟುಗಳು ಪ್ರಸ್ತುತ ಚಲಾವಣೆಯಲ್ಲಿರುವ ರೂ.೧೦, ರೂ.೨೦ ಮತ್ತು ರೂ.೫೦ರ ಮೌಲ್ಯವರ್ಗದ ನೋಟುಗಳನ್ನೇ ಹೋಲುವುದಾದರೂ ಒಂದು ಹೆಚ್ಚಿನ ಚಿನ್ಹೆಯನ್ನು ಎಂದರೆ ಸಂಖ್ಯಾ ಅಂಕಣದಲ್ಲಿ ಪೂರ್ವ ಅಕ್ಷರ/ ಸಂಖ್ಯೆ ಮತ್ತು ನಂತರದ ಅನುಕ್ರಮ ಸಂಖ್ಯೆಗಳ ನಡುವೆ * (ನಕ್ಷತ್ರ) ಚಿನ್ಹೆಯನ್ನು ಹೊಂದಿರುವುದು. ಇದರ ಪರಿಣಾಮವಾಗಿ ಬ್ಯಾಂಕು ಇತ್ತೀಚೆಗೆ ನೀಡಿರುವ ನೋಟು ಕಟ್ಟುಗಳಲ್ಲಿ ಕೆಲವು ನಕ್ಷತ್ರ ಮಾಲಿಕೆ ನೋಟುಗಳು ಎಂದರೆ ಸಂಖ್ಯಾ ಅಂಕಣದಲ್ಲಿ ಪೂರ್ವ ಅಕ್ಷರ/ ಸಂಖ್ಯೆ ಮತ್ತು ನಂತರದ ಅನುಕ್ರಮ ಸಂಖ್ಯೆಗಳ ನಡುವೆ * (ನಕ್ಷತ್ರ) ಚಿನ್ಹೆಯಿರುವ ನೋಟುಗಳೂ ಸಹ ಸಿಗಬಹುದು. ನೋಟು ಕಟ್ಟನ್ನು ಬಂಧಿಸಿರುವ ಕಾಗದ ಪಟ್ಟಿಯು ನಕ್ಷತ್ರ ಮಾಲಿಕೆ ನೋಟುಗಳ ಇರುವಿಕೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ನಕ್ಷತ್ರ ಮಾಲಿಕೆಯ ಹೊಸ ನೋಟು ಕಟ್ಟುಗಳು ನಕ್ಷತ್ರ ಮಾಲಿಕೆ ನೋಟುಗಳನ್ನು ಕೆಳಗಡೆ ಹೊಂದಿದ್ದು, ಎಂದಿನಂತೆ ಒಂದು ನೂರು ನೋಟುಗಳನ್ನು ಹೊಂದಿರುತ್ತದೆ. ನಕ್ಷತ್ರ ಮಾಲಿಕೆಯ ಬ್ಯಾಂಕು ನೋಟುಗಳು ವಿಧಿಮಾನ್ಯ ಚಲಾವಣೆಯಲ್ಲಿದ್ದು, ಸಾರ್ವಜನಿಕರು ಯಾವುದೇ ಹಿಂಜರಿಕೆಯಿಲ್ಲದೇ ಈ ಬ್ಯಾಂಕು ನೋಟುಗಳನ್ನು ಸ್ವೀಕರಿಸಬಹುದು ಹಾಗೂ ಬಳಸಬಹುದು.

ಪ್ರಸ್ತುತ ನೀಡಲಾಗುತ್ತಿರುವ ಹೊಸ ಬ್ಯಾಂಕ್ ನೋಟುಗಳ ಕಟ್ಟುಗಳಲ್ಲಿ ಅನುಕ್ರಮವಾಗಿ ೧ ರಿಂದ ೧೦೦ ರ ಸಂಖ್ಯೆಯ ವರೆಗೆ ಮುದ್ರಿಸಲಾಗಿರುವುದು. ಪ್ರತಿ ಬ್ಯಾಂಕು ನೋಟು ಪೂರ್ವಪದ/ ಸಂಖ್ಯೆಯ ಜೊತೆಗೆ ಒಂದು ವಿಶಿಷ್ಟ ಅನುಕ್ರಮ ಸಂಖ್ಯೆಯನ್ನು ಹೊಂದಿರುವುದು. ಪ್ರಸ್ತುತ, ಯಾವುದೇ ನೋಟು ಕಟ್ಟಿನಲ್ಲಿ ಮುದ್ರಣ ದೋಷವಿರುವ ನೋಟುಗಳ ಬದಲು, ಅದರ ಸ್ಥಾನದಲ್ಲಿ ಅದೇ ಸಂಖ್ಯೆಯ ದೋಷಮುಕ್ತ ನೋಟುಗಳನ್ನು, ನೋಟುಗಳ ಅನುಕ್ರಮ ಸಂಖ್ಯೆಯಲ್ಲಿ ವ್ಯತ್ಯಾಸವಾಗದಂತೆ ಅದೇ ಅನುಕ್ರಮ ಸಂಖ್ಯೆಗಳನ್ನು ಮುಂದುವರಿಸಿಕೊಂಡು ಬರಲು ಅನುವಾಗುವಂತೆ ಸೇರಿಸಲಾಗುವುದು. ಈ ಪ್ರಕ್ರಿಯೆ ಹೆಚ್ಚಿನ ಸಮಯ/ ವೆಚ್ಚ ಮತ್ತು ಸಿಬ್ಬಂದಿಯ ಮಧ್ಯ ಪ್ರವೇಶಕ್ಕೆ ಆಸ್ಪದ ನೀಡುತ್ತದೆ.

ಅಂತರರಾಷ್ಟ್ರೀಯ ಉತ್ಕೃಷ್ಟ ಪದ್ಧತಿಗೆ ಸರಿಗಟ್ಟುವಂತೆ ತನ್ನ ವಿಶಿಷ್ಟ ಛಾಪನ್ನು ಮೂಡಿಸುವ ಪ್ರಯತ್ನಗಳ ಒಂದು ಭಾಗವಾಗಿ ಹಾಗೂ ನೋಟು ಮುದ್ರಣಾಲಯಗಳಲ್ಲಿ ವೆಚ್ಚವನ್ನು ತಗ್ಗಿಸುವ ಮತ್ತು ಕಾರ್ಯಕ್ಷಮತೆಯನ್ನು ತರುವ ಉದ್ದೇಶದಿಂದ ಹಾಗು ಮುದ್ರಣ ದೋಷವಿರುವ ನೋಟುಗಳ ಸ್ಥಾನದಲ್ಲಿ ಬೇರೆ ನೋಟುಗಳನ್ನು ಸೇರಿಸಲು ಅನುವಾಗುವಂತೆ, ರಿಸರ್ವ್ ಬ್ಯಾಂಕ್ ನಕ್ಷತ್ರ ಮಾಲಿಕೆ ಸಂಖ್ಯಾ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಇದನ್ನು ಈ ಏಪ್ರಿಲ್ ತಿಂಗಳಿನಲ್ಲಿ, ವಾರ್ಷಿಕ ನೀತಿ ೨೦೦೬-೨೦೦೭ ರಲ್ಲಿ ಪ್ರಕಟಿಸಲಾಗಿದೆ.

ಅಲ್ಪನಾ ಕಿಲ್ಲಾವಾಲ
ಮುಖ್ಯ ಮಹಾ ವ್ಯವಸ್ಥಾಪಕರು